# ಆಪದ್ಬಾಂಧವ



ಕಚೇರಿ ಕೆಲಸ ಮುಗಿಯುವ ಹಂತದಲ್ಲಿದ್ದಾಗ ಜ್ಯೋತಿಯಿಂದ ಫೋನ್ ಬಂದಿತು.

"ರ‍್ರೀ... ಯಾರೋ ಧರಣೇಂದ್ರಯ್ಯ ಅಂತ ಬಂದಿದ್ದಾರೆ. ನಿಮ್ಮ ದೂರದ ಸಂಬಂಧಿ ಅಂತೆ. ಬೇಗ ಬನ್ನಿ..."

ಧರಣೇಂದ್ರಯ್ಯ ಹೆಸರಿನವರು ನನ್ನ ಸ್ನೇಹಿತರ ಬಳಗದಲ್ಲಾಗಲೀ, ಹತ್ತಿರದ ಸಂಬಂಧದಲ್ಲಾಗಲೀ ಇದ್ದ ನೆನಪಿಲ್ಲ. ಕುತೂಹಲದಿಂದ ಕಚೇರಿ ಸಮಯ ಮುಗಿಯುತ್ತಿದ್ದಂತೆ ಮನೆ ದಾರಿಗೆ ಸ್ಕೂಟರ್ ಓಡಿಸಿದೆ.

ಮನೆಯ ಬಾಗಿಲಲ್ಲೇ ಹೆಂಡತಿ ನಿಂತಿದ್ದಳು.

"ಎಲ್ಲಿದ್ದಾರೆ ಅವರು?" ಕೇಳಿದೆ.

"ಇಲ್ಲೆ ವರಾಂಡದಲ್ಲಿ ಕೂತಿದ್ದಾರೆ."

ಹೇಳಿ ಜ್ಯೋತಿ ಒಳಗಡೆ ಹೋದಳು.

ನಿವೃತ್ತ ಪ್ರೊಫೆಸರನಂತೆ ನೀಟಾಗಿ ತಲೆ ಬಾಚಿಕೊಂಡು, ಲಕ್ಷಣವಾಗಿ ಮುಖ ಕ್ಷೌರ ಮಾಡಿಕೊಂಡಿದ್ದ, ತುಟಿಗಳಲ್ಲಿ ಮಂದಹಾಸ ತುಂಬಿಕೊಂಡಿದ್ದ ಸುಮಾರು ಅರವತ್ತೈದರ ಆಸುಪಾಸಿನ ವ್ಯಕ್ತಿಯೊಬ್ಬರು ಕೂತಿದ್ದರು.

"ಕೆಲಸದಿಂದ ನೇರವಾಗಿ ಬಂದ ಹಾಗಿದೆ. ನನ್ನಿಂದ ತೊಂದರೆಯಾಗಿರಬೇಕಲ್ಲವೇ? ಮೊದಲು ಚಹಾ ಕುಡಿದು ರಿಲ್ಯಾಕ್ಸ್ ಮಾಡಿಕೊಳ್ಳಿ. ಆಮೇಲೆ ಮಾತಾಡೋಣ."

ತುಂಬಾ ವರ್ಷಗಳಿಂದ ಪರಿಚಯವಿರುವ ಆತ್ಮೀಯ ಸ್ನೇಹಿತರಂತೆ ಅವರು ಮಾತನಾಡಿದ ಧಾಟಿ ನನಗೆ ತೊಂದರೆ ಎನ್ನುವುದಕ್ಕಿಂತ ಹೆಚ್ಚಾಗಿ ಕುತೂಹಲವನ್ನುಂಟು ಮಾಡಿತ್ತು.

ನಾನು ಹಾಲ್‌ನೊಳಗೆ ಪ್ರವೇಶಿಸುತ್ತಿದ್ದಂತೆ ಜ್ಯೋತಿ, ಅಮ್ಮ ಹಾಗೂ ಮಕ್ಕಳಾದ ವಿನಯ್, ರಶ್ಮಿ, ಸ್ವಾತಿ ನನ್ನ ಸುತ್ತುವರೆದರು. "ಅಪ್ಪಾ ಯಾರಪ್ಪಾ ಅದು?" ಮೂರೂ ಮಕ್ಕಳದ್ದು ಒಂದೇ ಕುತೂಹಲದ ಪ್ರಶ್ನೆ.

"ನನಗೂ ಗೊತ್ತಿಲ್ಲ" ಎನ್ನುತ್ತಾ, "ಅವರಿಗೆ ಚಹಾ